ರಚಿಸಬೇಕು. ಅಲ್ಲಿಯೂ ಕೂಡ ಪ್ರತಿಪಕ್ಷದವರನ್ನು ನಿರ್ಲಕ್ಷಿಸುವ ಹವ್ಯಾಸವು ಇದೆ. ಅದು ತಪ್ಪಬೇಕು. ಪ್ರತಿಪಕ್ಷದವರನ್ನು, ನಗರದಲ್ಲಿನ ನಾಗರೀಕರನ್ನು, ತಂತ್ರಜ್ಞರನ್ನು ಸೇರಿಸಿ ಎಲ್ಲಾ ಮಹಾನಗರ ಪಾಲಿಕೆಗಳಲ್ಲಿ ಹಾಗೂ ನಗರಪಾಲಿಕೆಗಳಲ್ಲಿ ಒಂದು ಕಾವಲು ಸಮಿತಿಯನ್ನು ರಚಿಸಬೇಕು. ಈ ಬಗ್ಗೆ ಸರಕಾರದ ಧೋರಣೆಯನ್ನು ಸ್ಪಷ್ಟಪಡಿಸಬೇಕು.

ಶ್ರೀ ಬಿ.ಎ.ಮೊಯಿದ್ದೀನ್: ಮಾನ್ಯ ಉಪಾಧ್ಯಕ್ಷರೇ, ಅವರಿಗೆ ಎಲ್ಲಾ ಗೊತ್ತಿರತಕ್ಕಂಥ ವಿಚಾರ ಇದು. ಅಲ್ಲಿಗೆ ಎಡಿಬಿಯ ಸಾಲವು ಬಂದೇ ಇಲ್ಲ. ಅದು ಯಾವಾಗ ಬರುತ್ತದೆ ಎಂಬುದು ಕೂಡ ಗೊತ್ತಿಲ್ಲ. ಅದು ಇನ್ನೂ ಸ್ಯಾಂಕ್ಷನ್ ಮಾಡಲ್ಪಟ್ಟಿಲ್ಲ, ಅದು ತನ್ನ ಸಮಯದಲ್ಲಿ ಆಗುತ್ತದೆ. ಆದ್ದರಿಂದ ಎಡಿಬಿಯಲ್ಲಿನ ಹಣ ಬರುತ್ತಿದೆ ಎಂಬ ಕಾರಣಕ್ಕಾಗಿ ವರ್ಗಾವಣೆಯ ಪೈಪೋಟಿ ಮುಂತಾಗಿ ನಡೆಯುತ್ತಿದೆ ಎಂಬ ಯಾವುದೋ ಪೀತಪತ್ರಿಕೆಯ ವರದಿಯನ್ನು ಉಲ್ಲೇಖಿಸುವುದು ಸರಿಯಲ್ಲ. ಕಮೀಶನರ್ ವಿಚಾರದಲ್ಲಿ ಕೋರ್ಟ್ ಒಂದು ತೀರ್ಮಾನ ತೆಗೆದುಕೊಂಡಿದ್ದು ಅದು ಆಗಿದೆ. ಅಂತೆಯೇ ನಿಮಗೆ ಏನು ಬೇಕಾಗಿತ್ತೋ ಅದು ಆಗಿದೆ.

(ಟ) ಕೆ.ಜಿ.ಎಫ್‌ನಲ್ಲಿ ಅಗ್ನಿಶಾಮಕ ಠಾಣೆ ಸ್ಥಾಪನೆ.

ಶ್ರೀ ಎಸ್.ರಾಜೇಂದ್ರನ್ (ಕೆಜಿಎಫ್): ಮಾನ್ಯ ಉಪಾಧ್ಯಕ್ಷರೇ, ನಮ್ಮ ಸರಕಾರದವರು ನನ್ನ ಕ್ಷೇತ್ರದಲ್ಲಿ ಬರೇ ಕಲ್ಲುಗಳನ್ನು ಹಾಕಿದ್ದಾರೆ. ಬಸ್‌ಸ್ಟ್ಯಾಂಡ್ ಮುಂತಾಗಿ ಎಲ್ಲಾ ಕಡೆಗಳಲ್ಲಿ ಕಲ್ಲು ಹಾಕಿದ್ದಾರೆ. ಹಾಗೆ ಕಲ್ಲು ಹಾಕುವ ಬದಲು ನನ್ನ ತಲೆಯ ಮೇಲೆ ಹಾಕಿದ್ದರೂ ಸಂತೋಷವಾಗುತ್ತಿತ್ತು. ಅಗ್ನಿಶಾಮಕ ಮಂತ್ರಿಯವರು ಬಂದು ಕಲ್ಲೂ ಹಾಕಿ ಪೂಜೆ ಮುಂತಾಗಿ ಮಾಡಿದರು. ಈಗ ಆ ಕಲ್ಲನ್ನು ಹುಡುಕಬೇಕಾಗಿದೆ. ಅಲ್ಲಿ ಕಸ ತುಂಬಿದೆ. ಸುಮಾರು ಒಂದು ವರ್ಷದ ನಂತರ ಅದಕ್ಕೆ ಬೇಕಾದ ವೆಹಿಕಲ್‌ಗೆ 32ಲಕ್ಷ ರೂಪಾಯಿಗಳಾಗುತ್ತವೆ ಎಲ್ಲಿಂದ ಕೊಡುವುದು? ಅಲ್ಲಿ ವಾಹನ ನಿಲ್ಲಿಸಲು ಶೆಲ್ಟರ್ ಇಲ್ಲ, ಎಂದು ಹೇಳುತ್ತಾರೆ. ನಾವು ಬೇಕಾಗುವ ಜಾಗ ಮುಂತಾದ ಸೌಲಭ್ಯಗಳನ್ನು ಕೊಡುತ್ತೇವೆ. ಅದಕ್ಕೆ ಪೂಜೆ ಮಾಡುವ ಸಂದರ್ಭದಲ್ಲಿ ಮಾನ್ಯ ಸೋಮಣ್ಣನವರು 15ದಿನಗಳೊಳಗಾಗಿ ಮೊದಲ ಕಂತಿನ 20ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದಿದ್ದರು. ಕಟ್ಟಡ ಕಟ್ಟಿ ಎಂದು ಹೇಳಿದರು. ಆದರೆ ಇನ್ನೂ ಕಟ್ಟಡ ಕಟ್ಟಿಲ್ಲ. ಜಾಗವನ್ನು ತೆಗೆದುಕೊಂಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ನಿಮ್ಮ ಅಧಿಕಾರಿಗಳು ಮಾತ್ರ ವಾಹನ, ಟೆಲಿಫೋನ್, ಟಿಎ, ಡಿಎ, ಮುಂತಾಗಿ ಎಲ್ಲಾ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಅವರೇ ಜಾಗದ ಬಗ್ಗೆ ನನ್ನನ್ನು ಕೇಳುತ್ತಿದ್ದಾರೆ. ಅದನ್ನು ಪತ್ತೆ ಹಚ್ಚುವ ಕೆಲಸವು ಅವರದ್ದಲ್ಲವೆ? ಮುನ್ಸಿಪಾಲಿಟಿಯವರು ಜಾಗವನ್ನು ಸರಕಾರಕ್ಕೆ ಕೊಟ್ಟಿದ್ದೇವೆ. ನಾವು ನಿರ್ಣಯ ಮಾಡಿ

ಅಗ್ನಿಶಾಮಕ ವ್ಯವಸ್ಥೆಗೆ ಜಾಗವನ್ನು ಮಂಜೂರು ಮಾಡಿದ್ದಾಗಿದೆ. ಇನ್ನು ನಾವೇನು ಮಾಡಬೇಕು? ನಿಮ್ಮ ಅಧಿಕಾರಿಗಳು ಮಹಾರಾಜರಂತೆ ಕುಳಿತುಕೊಂಡರೆ ಆಗುತ್ತದೆಯೇ? ಅವರೇ ಅದನ್ನು ವ್ಯವಸ್ಥೆ ಮಾಡಿಕೊಳ್ಳಬೇಕು. ಹೆಚ್‌ಯುಡಿ ಇಲಾಖೆಯವರನ್ನು ಭೇಟಿ ಮಾಡಬೇಕು. ನಾನು ಎಲ್ಲಾ ಕೆಲಸ ಮಾಡಿದಮೇಲೆ, ಏನೋ ಬೇರೆ ಹೇಳುತ್ತಾರೆ. ನಮ್ಮ ಅಗ್ನಿಶಾಮಕ ಠಾಣೆಗೆ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು. 20ಲಕ್ಷರೂಪಾಯಿಗಳನ್ನು ಬಿಡುಗಡೆ ಮಾಡಿ 10ದಿನಗಳೊಳಗಾಗಿ ಕೆಲಸವನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎನ್.ಶಿವಣ್ಣನವರ್: ಮಾನ್ಯ ಅಧ್ಯಕ್ಷರೇ, ಸರಕಾರಿ ಆದೇಶ ಸಂಖ್ಯೆ- 163, -96, ದಿನಾಂಕ: 28- 10- 97ರಂದು ಕೆಜಿಎಫ್ ಪಟ್ಟಣದಲ್ಲಿ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸಲು ಮಂಜೂರಾಗಿದ್ದು ಈ ಠಾಣೆಯನ್ನು ಸ್ಥಳೀಯ ಕೊಳಚೆ ನಿರ್ಮೂಲನ ಮಂಡಳಿಯವರು, ಒದಗಿಸಿರುವ ತಾತ್ಕಾಲಿಕ ಕಟ್ಟಡದಲ್ಲಿ 12- 2- 99ರಂದು ಪ್ರಾರಂಭಿಸಲಾಗಿದೆ. ಅಗ್ನಿಶಾಮಕ ಠಾಣೆಗೆ ಸ್ವಂತ ಕಟ್ಟಡವನ್ನು ಕಟ್ಟಲು ರಾಬರ್ಟ್‌ಸನ್‌ಪೇಟೆಯ ಸರ್ವೆ ನಂಬರ್ 43ರ ಅಸೆಸ್‌ಮೆಂಟ್ ಸಂಖ್ಯೆ: 215- 205ರಲ್ಲಿ ಒಟ್ಟು 51, 991 ಚದುರ ಅಡಿಗಳಷ್ಟು ನಿವೇಶನವನ್ನು ಗುರುತಿಸಲಾಗಿದೆ. ಈ ನಿವೇಶನವನ್ನು ಉಚಿತವಾಗಿ ನೀಡಲು ಸರಕಾರದ ಪ್ರಧಾನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು- ಇವರುಗಳಿಗೆ ದಿನಾಂಕ: 4- 2- 99ರಂದು ಪತ್ರವನ್ನು ಬರೆಯಲಾಗಿದೆ. ಆದಾಗ್ಯು ಈ ನಿವೇಶನದಲ್ಲಿ ಅಗ್ನಿಶಾಮಕ ಠಾಣೆ ನಿರ್ಮಿಸಲು ದಿನಾಂಕ 12.2.99ರಂದು ಅಗಿನ ಬಂದೀಖಾನೆ ಹಾಗೂ ಅಗ್ನಿಶಾಮಕ ಸಚಿವರು ಶಂಕುಸ್ಥಾಪನೆ ನೆರವೇರಿಸಿರುತ್ತಾರೆ. ಸರ್ಕಾರದಿಂದ ಈ ನಿವೇಶನವನ್ನು ಇನ್ನೂ ಅಗ್ನಿಶಾಮಕ ಇಲಾಖೆಗೆ ಕೊಟ್ಟಿರುವುದಿಲ್ಲ. ಈ ನಿವೇಶನವನ್ನು ಪಡೆದ ತಕ್ಷಣವೇ ಕಟ್ಟಡವನ್ನು ಕಟ್ಟಲು ಕ್ರಮಕೈಗೊಳ್ಳಲಾಗುವುದು.

ಶ್ರೀ ಎಸ್.ರಾಜೇಂದ್ರನ್: ತಾವು ಹೇಗೆ ಮಾಡುತ್ತೀರೋ ಏನು ಮಾಡುತ್ತೀರೋ ನನಗೆ ಹಣ ಕೊಟ್ಟು ನನ್ನ ಕ್ಷೇತ್ರದಲ್ಲಿ ನಿರ್ಮಾಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಎಷ್ಟು ದಿವಸ ಆಗುತ್ತದೆ, ಯಾವಾಗ ಮಾಡುತ್ತಾರೆ ಎಂದು ಉತ್ತರ ಕೊಡಬೇಕು.

ಶ್ರೀ ಬಿ.ಎಸ್.ಶಿವಣ್ಣನವರ್: ನಮ್ಮ ಇಲಾಖೆಗೆ ಜಾಗ ಹಸ್ತಾಂತರವಾದ ತಕ್ಷಣವೇ ಮತ್ತು ನಿನ್ನೆ ಮಾನ್ಯ ಹಣಕಾಸಿನ ಸಚಿವರೂ ಹೆಚ್ಚುವರಿ ಹಣಕಾಸು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ಆ ಹಣ ಬಂದ ತಕ್ಷಣವೇ ನಾವು ತೆಗೆದುಕೊಳ್ಳುತ್ತೇವೆ. ಕಟ್ಟಡದ ಸಲುವಾಗಿ ನಮ್ಮ ಇಲಾಖೆಗೆ 20 ಲಕ್ಷ ರೂಪಾಯಿ ಹಣ ಕೊಟ್ಟಿದ್ದಾರೆ. ಆ ಹಣ ಹಳೇ ಕೆಲಸಗಳಿಗೆ ಬೇಕಾಗುತ್ತದೆ ಎಂದು ಹೇಳಿದ್ದೇವೆ. ಈ ಹಿನ್ನೆಲೆಯಲ್ಲಿ ಹೆಚ್ಚುವರಿ ಅನುದಾನಕ್ಕೆ ಪ್ರಪೋಸಲ್ ಕಳಿಸಿಕೊಟ್ಟರೆ ನಾನು ಮಂಜೂರು ಮಾಡುತ್ತೇನೆ ಎಂದು ನಿನ್ನೆ ಆಶ್ವಾಸನೆ ಕೊಟ್ಟಿದ್ದಾರೆ. ಇನ್ನು 15- 20 ದಿವಸಗಳಲ್ಲಿ ಈ ಕೆಲಸ ಮಾಡುತ್ತೇವೆ.